# ನಗರಸಭಾ ಕಾರ್ಯಾಲಯ, ತುಮಕೂರು.

ಫ್ಯಾಕ್ಸ್ : 2275106, ದೂರವಾಣಿ ಸಂಖ್ಯೆ.
ಪೌರಾಯುಕ್ತರ ಕೊಠಡಿ: 2278480,
ಸಾರ್ವಜನಿಕ ದೂರು ವಿಭಾಗ: 2272200, 2271200
ವೆಬ್‌ಸೈಟ್:www.tumkurcity.gov.in

ನಂ.ನಸತು:ತಾಂಶಾ/ವಿವ/ಸಿಆರ್/93/2006-07 ದಿನಾಂಕ 28-03-2008.

## ಟೆಂಡರ್ ಪ್ರಕಟಣೆ

ನಗರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರು ವಿತರಣಾ ನಿರ್ವಹಣೆಯ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ನೀರು ಸರಬರಾಜು ಕಾರ್ಯದಲ್ಲಿ ಅನುಭವ **ಹೊಂದಿರುವ 120 ಕೆಲಸಗಾರರ ಸೇವೆಯನ್ನು ಹೊರ ಮೂಲದಿಂದ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ** ನೊಂದಾಯಿಸಲಾದ ಗುತ್ತಿಗೆದಾರರಿಂದ ಈ ಕೆಳಕಂಡ ನಮೂನೆಯಲ್ಲಿ ಟೆಂಡರ್‌ಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಮೊಹರು ಮಾಡಲಾದ ಲಕೋಟೆಯಲ್ಲಿ ದ್ವಿಪ್ರತಿಯಲ್ಲಿ ಪೌರಾಯುಕ್ತರು, ನಗರಸಭೆ, ಅಥವಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳವರ ಕಛೇರಿ, ತುಮಕೂರು ಇವರಿಗೆ ಸಲ್ಲಿಸಲು ಆಹ್ವಾನಿಸಲಾಗಿದೆ.

1. ಭರ್ತಿ ಮಾಡಿದ ಫಾರಂಗಳನ್ನು ದಿನಾಂಕ 06-05-2008 ರಂದು 4.30 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
2. ಸ್ವೀಕರಿಸಲಾಗುವ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನಾಂಕ 06-05-2008 ರಂದು ಸಂಜೆ 5.00 ಗಂಟೆಯೊಳಗಾಗಿ ಅಥವಾ ಮುಂದಿನ ದಿನಾಂಕದಂದು ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| **ಕ್ರ.ಸಂ.** | **ವಿವರ** | **ಕನಿಷ್ಟ ವೇತನ ಕಾಯ್ದೆ ಅಡಿಯಲ್ಲಿ ಕನಿಷ್ಟ ವೇತನ ಹಾಗೂ ಇಪಿಎಫ್ ಮತ್ತು ವಿಮೆ ಪ್ರೀಮಿಯಂ ಸೇರಿ ಪ್ರತಿ ತಿಂಗಳು ಪ್ರತಿ ಕಾರ್ಮಿಕರಿಗೆ ಕನಿಷ್ಟ 3650/-ಗಳಂತೆ ಪಾವತಿಸುವಂತೆ ನಿರ್ಧರಿಸಲಾಗಿರುತ್ತೆ ಹಾಗೂ ಸೇವಾ ತೆರಿಗೆ ಹೊರತುಪಡಿಸಿ ಅಂದಾಜು ಮೊತ್ತ ತಿಂಗಳು (120 ಕೆಲಸಗಾರರಿಗೆ) (ರೂ.ಗಳಲ್ಲಿ)** | **ಇಎಂಡಿ ಮೊತ್ತ** | **ಅರ್ಹ ದರ್ಜೆ ಗುತ್ತಿಗೆದಾರರು** | **ಗುತ್ತಿಗೆದಾರರು ನಮೂದಿಸಬೇಕಾದ ದರ (ಕನಿಷ್ಟ ವೇತನ ಕಾಯ್ದೆ ಅಡಿಯಲ್ಲಿ ಮಾಹೆಯಾನ ಕಾಲಂ (3) ರಲ್ಲಿ ನಿಗದಿತ ವೇತನ ಹಾಗೂ ಇಪಿಎಫ್ / ವಿಮೆ ಪ್ರೀಮಿಯಂ ಹಾಗೂ ಇತರೆ ಶುಲ್ಕ ಸೇವಾ ತೆರಿಗೆ ಸೇರಿಸಿ ಒಟ್ಟು ದರವನ್ನು ನಮೂದಿಸುವುದು)** |
|---|---|---|---|---|---|
| 1 | 2 | 3 | 4 | 5 | 6 |
| 1 | ನೀರು ಸರಬರಾಜು ಕಾರ್ಯನಿರ್ವಹಿಸಲು ಕೂಲಿ ಕಾರ್ಮಿಕರ ಸೇವೆಯನ್ನು ಸರಬರಾಜು ಮಾಡುವುದು. | 52,56,000.00 (ಸೇವ ತೆರಿಗೆ ಹೊರತುಪಡಿಸಿ) | 52600.00 | ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರು | |

### ಷರತ್ತುಗಳು

1. ಗುತ್ತಿಗೆದಾರರು ತಮ್ಮ ಸಂಸ್ಥೆ ವತಿಯಿಂದ ಇಎಸ್ಐ, ಪಿಎಫ್ಐ ಮತ್ತು ಸೇವಾ ತೆರಿಗೆಗಳನ್ನು ಪಾವತಿಸಲು ಸಂಬಂಧಪಟ್ಟ ಇಲಾಖೆಯಲ್ಲಿ ನೊಂದಾಯಿತರಾಗಿರುವ ಬಗ್ಗೆ ವಿವರಣೆಯನ್ನು ಹಾಗೂ ದಾಖಲಾತಿಯನ್ನು ಟೆಂಡರ್ ದರಪಟ್ಟಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕಾಗಿರುತ್ತದೆ. ಮತ್ತು ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ನಗರಸಭೆಯಲ್ಲಿ **ಈ ಹಿಂದೆ ನೀರು**

**ಸರಬರಾಜು ವಿಭಾಗದಲ್ಲಿ ಹೊರ ಮೂಲದಿಂದ ಹಾಗೂ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿದ ಕೆಲಸಗಾರರಿಗೆ ಆದ್ಯತೆ ನೀಡಿ ಅವರ ಸೇವೆಯನ್ನು ನಗರಸಭೆಗೆ ಒದಗಿಸತಕ್ಕದ್ದು.** ಹಾಗೂ ಅವರಿಗೆ ಯಾವುದೇ ರೀತಿಯ ಕಿರುಕುಳ ನೀಡತಕ್ಕದ್ದಲ್ಲ.

2. 120 ಕೆಲಸಗಾರರ ಪೈಕಿ ಯಾರಾದರು ಗೈರು ಹಾಜರಾಗಿದ್ದಲ್ಲಿ ಬದಲಿ ವ್ಯವಸ್ಥೆಯನ್ನು ಮಾಡತಕ್ಕದ್ದು.
3. ಕನಿಷ್ಟ ವೇತನ ಅಡಿಯ ಕಾಯ್ದೆಯ ಮೇರೆಗೆ ಅಂಥ ಕೆಲಸಗಾರರಿಗೆ ಕಾಲ ಕಾಲಕ್ಕೆ ನಿಗದಿಪಡಿಸಲಾಗಿರುವ ಕನಿಷ್ಟ ವೇತವನ್ನು ನಗರಸಭೆಯ / ಕಾರ್ಮಿಕ ಇಲಾಖೆ ಅಧಿಕಾರ ಸಮಕ್ಷಮ ಪ್ರತಿ ಮಾಹೆಯ ನಿಗದಿತ ದಿನಾಂಕದೊಳಗೆ ಪಾವತಿಸತಕ್ಕದ್ದು. ಹಾಗೂ ಕಾರ್ಮಿಕ ಇಲಾಖೆ ನಿಯಮಾನುಸಾರ ಸದರಿ ಕೆಲಸಗಾರರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು (ಇಪಿಎಫ್, ವಿಮೆ ಪ್ರಿಮಿಯಂ ಇತ್ಯಾದಿ) ಸೇರಿ ಪ್ರತಿ ಮಾಹೆಯಾನ ಒಟ್ಟು ರೂ. 3650/– ಗಳಂತೆ ಪಾವತಿಸತಕ್ಕದ್ದು. ಹಾಗೂ ಈ ರೀತಿ ಸೌಲಭ್ಯ ವೇತನ ಪಾವತಿಸಲು ಹಾಗೂ ಮತ್ತಿತರ ತೆರಿಗೆಗಳಿಗೆ ಒಳಪಟ್ಟು ಒಟ್ಟು ಮಾಹೆಯಾನ ಟೆಂಡರ್ ದರವನ್ನು ನಮೂದಿಸತಕ್ಕದ್ದು. ತಪ್ಪಿದಲ್ಲಿ ಟೆಂಡರ್‌ನ್ನು ರದ್ದುಪಡಿಸುವ ಷರತ್ತಿಗೆ ಒಳಪಟ್ಟಿರುತ್ತೆ.
4. ನಿಯಮಾನುಸಾರವಾಗಿ ವೇತನ ಹಾಗೂ ಇತರೆ ಸೌಲಭ್ಯಗಳನ್ನು ಕೆಲಸಗಾರರಿಗೆ ನಿಗದಿತ ದಿನಾಂಕದೊಳಗೆ ಪಾವತಿಸದಿದ್ದಲ್ಲಿ ಕಂಟ್ರಾಕ್ಟ್ ಲೇಬರ್ (ರೆಗ್ಯುಲೇಷನ್ ಅಂಡ್ ಅಬಾಲಿಷನ್) ಅಧಿನಿಯಮ 1970ರ ಅಡಿಯಲ್ಲಿ ಸೂಕ್ತವಾಗಿ ನಿರ್ಧರಿಸಿ ಕೆಲಸಗಾರರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ನಗರಸಭೆಯ ವತಿಯಿಂದಲೇ ಪಾವತಿಸಿ ಸದರಿ ವೆಚ್ಚವನ್ನು ಗುತ್ತಿಗೆದಾರರಿಂದ ವಸೂಲಾತಿ ಮಾಡಲಾಗುವುದು.
5. ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ಭದ್ರತಾ ಠೇವಣಿ ಆಗಿ 5,25,600/– ರೂ.ಗಳನ್ನು ಪೌರಾಯುಕ್ತರು, ನಗರಸಭೆ, ತುಮಕೂರು ರವರ ಹೆಸರಿನಲ್ಲಿ ಡಿ.ಡಿ., ಪಿಡಿಆರ್, ಬ್ಯಾಂಕರ್ಸ್ ಚೆಕ್, ಒತ್ತೆಯಿಟ್ಟಿರುವ, ಇಡಲಾದ ಎನ್.ಎಸ್.ಸಿ.ಗಳನ್ನು ಟೆಂಡರ್ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸಲ್ಲಿಸತಕ್ಕದ್ದು.
6. ಟೆಂಡರ್ ಅರ್ಜಿಯನ್ನು ಸಲ್ಲಿಸುವಾಗ ಕಾರ್ಮಿಕ ಇಲಾಖೆಯಲ್ಲಿ ಅರ್ಹ ದರ್ಜೆ ನೊಂದಾಯಿತರಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.
7. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
8. ಗುತ್ತಿಗೆದಾರರು ಸರಬರಾಜು ಮಾಡುವ ಕೆಲಸಗಾರರಿಗೆ ಗುರುತಿನ ಚೀಟಿ ಮತ್ತು ಸಮವಸ್ತ್ರಗಳನ್ನು ಧರಿಸಲು ನೀಡಬೇಕು.
9. ಯಾವ ಕಾರಣವನ್ನು ಸಹ ನೀಡದೆ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
10. ಮೇಲ್ಕಂಡ ವಿಷಯದಲ್ಲಿ ಏನಾದರು ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಕೊಂಡಿದೆ.
11. ಗುತ್ತಿಗೆಯ ಕಾರ್ಯಾದೇಶ ಪಡೆದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತೆ. ಹಾಗೂ ನಗರಸಭೆ ಇಚ್ಚೆಸಿದಲ್ಲಿ ಸದರಿ ಗುತ್ತಿಗೆ ಅವದಿಯನ್ನು ಮತ್ತೊಂದು ವರ್ಷದವರಿಗೆ ವಿಸ್ತರಿಸಲು ಅಧಿಕಾರ ಹೊಂದಿರುತ್ತದೆ.
12. ಹೆಚ್ಚಿನ ವಿಷಯಗಳಿಗೆ ನಗರಸಭೆಯ ಕಛೇರಿಯ ಅಭಿಯಂತರರ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

| | | |
|---|---|---|
| **ಸಹಿ/–** | **ಸಹಿ/–** | **ಸಹಿ/–** |
| **(ಅಸ್ಲಾಂಪಾಷ)** | **(ಚಂದ್ರಯ್ಯ)** | **(ಅಬ್ದುಲ್ ಖಯ್ಯೂಂ ಕೆ.ಎಂ.ಎ.ಎಸ್)** |
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** |